**ಬ್ರೆಜಿಲ್‌ನ ರಿಯೋ ಡಿ ಜನ್ಯೆರೊದಲ್ಲಿ ನಡೆಯುತ್ತಿರುವ ಬ್ರಿಕ್ಸ್ ಶೃಂಗಸಭೆಯ ನೇಪಥ್ಯದಲ್ಲಿ ಪ್ರಧಾನಿಯಿಂದ ಕ್ಯೂಬಾ ಅಧ್ಯಕ್ಷರ ಭೇಟಿ**

ಜುಲೈ 06, 2025

ಬ್ರೆಜಿಲ್‌ನ ರಿಯೋ ಡಿ ಜನ್ಯೆರೊದಲ್ಲಿ 17 ನೇ ಬ್ರಿಕ್ಸ್ ಶೃಂಗಸಭೆಯ ನೇಪಥ್ಯದಲ್ಲಿ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರು ಇಂದು ಕ್ಯೂಬಾ ಅಧ್ಯಕ್ಷ, ಗೌರವಾನ್ವಿತ ಮಿಗುಯೆಲ್ ಡಯಾಜ್-ಕ್ಯಾನೆಲ್ ಬೆರ್ಮುಡೆಜ್ ಅವರನ್ನು ಭೇಟಿ ಮಾಡಿದರು. ಕ್ಯೂಬಾ ವಿಶೇಷ ಆಹ್ವಾನ ಪಡೆದಿದ್ದ, 2023 ರಲ್ಲಿ ಜೋಹಾನ್ಸ್‌ಬರ್ಗ್‌ನಲ್ಲಿ ನಡೆದ ಬ್ರಿಕ್ಸ್ ಶೃಂಗಸಭೆಯಲ್ಲಿ ಪ್ರಧಾನಮಂತ್ರಿ ಈ ಮೊದಲು ಅಧ್ಯಕ್ಷ ಡಯಾಜ್-ಕ್ಯಾನೆಲ್ ಅವರನ್ನು ಭೇಟಿ ಮಾಡಿದ್ದರು

2. ಆರ್ಥಿಕ ಸಹಕಾರ, ಅಭಿವೃದ್ಧಿ ಪಾಲುದಾರಿಕೆ, ಫಿನ್‌ಟೆಕ್, ಸಾಮರ್ಥ್ಯ ವರ್ಧನೆ, ವಿಜ್ಞಾನ ಮತ್ತು ತಂತ್ರಜ್ಞಾನ, ವಿಪತ್ತು ನಿರ್ವಹಣೆ ಮತ್ತು ಆರೋಗ್ಯ ಕ್ಷೇತ್ರಗಳಲ್ಲಿ ದ್ವಿಪಕ್ಷೀಯ ಸಂಬಂಧಗಳನ್ನು ಇಬ್ಬರೂ ನಾಯಕರು ಪರಿಶೀಲಿಸಿದರು.  ಡಜಿಟಲ್ ಡೊಮೇನ್‌ನಲ್ಲಿ ಭಾರತದ ಪರಿಣತಿಯನ್ನು ಗುರುತಿಸಿ, ಅಧ್ಯಕ್ಷ ಡಯಾಜ್-ಕ್ಯಾನೆಲ್ ಅವರು ಭಾರತದ ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯ ಮತ್ತು UPI ನಲ್ಲಿ ಆಸಕ್ತಿಯನ್ನು ವ್ಯಕ್ತಪಡಿಸಿದರು. ಕ್ಯೂಬಾವು ಆಯುರ್ವೇದವನ್ನು ಗುರುತಿಸಿದ್ದಕ್ಕಾಗಿ ಮತ್ತು ಕ್ಯೂಬಾದ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯಲ್ಲಿ ಆಯುರ್ವೇದವನ್ನು ಸಂಯೋಜಿಸಲು ಬೆಂಬಲ ನೀಡಿದ್ದಕ್ಕಾಗಿ ಪ್ರಧಾನಮಂತ್ರಿ ಅವರು ಮೆಚ್ಚುಗೆ ವ್ಯಕ್ತಪಡಿಸಿದರು. ಭಾರತೀಯ ಜೆನೆರಿಕ್ ಔಷಧಿಗಳಿಗೆ ಪ್ರವೇಶವನ್ನು ಒದಗಿಸುವ ಭಾರತೀಯ ಔಷಧಶಾಸ್ತ್ರವನ್ನು ಕ್ಯೂಬಾ ಗುರುತಿಸಬೇಕೆಂದು ಪ್ರಧಾನಮಂತ್ರಿ ಅವರು ಪ್ರಸ್ತಾಪಿಸಿದರು.

3. ಆರೋಗ್ಯ, ಸಾಂಕ್ರಾಮಿಕ ರೋಗಗಳು ಮತ್ತು ಹವಾಮಾನ ಬದಲಾವಣೆಯ ಕ್ಷೇತ್ರಗಳನ್ನು ಒಳಗೊಂಡಂತೆ ಜಾಗತಿಕ ದಕ್ಷಿಣದ ಕಾಳಜಿಯ ವಿಷಯಗಳ ಬಗ್ಗೆ ಕೆಲಸ ಮಾಡಲು ಇಬ್ಬರೂ ನಾಯಕರು ಒಪ್ಪಿಕೊಂಡರು. ಬಹುಪಕ್ಷೀಯ ಕ್ಷೇತ್ರದಲ್ಲಿ ಎರಡು ದೇಶಗಳ ನಡುವಿನ ಸಹಕಾರವನ್ನು ಅವರು ಪ್ರಶಂಸಿಸಿದರು.

ರಿಯೋ ಡಿ ಜನ್ಯೆರೊ

ಜುಲೈ 06, 2025